Karnatak Law Society's
**Vishwanathrao Deshpande Institute of Technology**
(Approved by AICTE, New Delhi. Affiliated to VTU, Belagavi)
(Recognised Under Section 2(f) by UGC, New Delhi)
Udyog Vidya Nagar, Haliyal – 581329, Dist: Uttar Kannada (Karnataka)
Phone: 08284-220861, 220334, 221409, Fax: 08284-220813
www.klsvdit.edu.in principal@klsvdit.edu.in

Date: 01-07-2022

ಪತ್ರಿಕಾ ಪ್ರಕಟಣೆ:

## ಶ್ರೀ. ವಿ ಆರ್ ದೇಶಪಾಂಡೆ ಅವರ ಜನ್ಮದಿನದ ಪ್ರಯುಕ್ತ ರಕ್ತದಾನ ಶಿಬಿರ

ಕೆ.ಎಲ್.ಎಸ್. ವ್ಹಿ.ಡಿ.ಐ.ಟಿ ಹಳಿಯಾಳದಲ್ಲಿ ಜುಲೈ 1 ರಂದು ದಿವಂಗತ ಶ್ರೀ ವಿಶ್ವನಾಥರಾವ್. ಆರ್ ದೇಶಪಾಂಡೆ ಅವರ ಜನ್ಮದಿನದ ಪ್ರಯುಕ್ತ ರಕ್ತದಾನ ಶಿಬಿರವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮವನ್ನು ಹಳಿಯಾಳದ ವಿ.ಆರ್.ಡಿ.ಎಂ ಟ್ರಸ್ಟ್, ಧಾರವಾಡ ನವನಗರದ ರೋಟರಿ ಬ್ಲಡ್ ಬ್ಯಾಂಕ್ ಮತ್ತು ಮಹಾವಿದ್ಯಾಲಯದ ಎನ್.ಎಸ್.ಎಸ್. ಘಟಕದ ಜಂಟಿ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಬೆಳಿಗ್ಗೆ 11 ಘಂಟೆಗೆ ಉದ್ಘಾಟನೆಗೊಂಡ ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಧಾರವಾಡ ನವನಗರದ ರೋಟರಿ ಬ್ಲಡ್ ಬ್ಯಾಂಕ್ ನ ಡಾ|| ಉಮೇಶ್ ಹಳ್ಳಿಕೇರಿ ಯವರು ಮಾತನಾಡುತ್ತಾ, ಪ್ರತಿವರ್ಷ ಮಹಾವಿದ್ಯಾಲಯ ಎರಡು ಬಾರಿ ರಕ್ತದಾನ ಶಿಬಿರವನ್ನು ಆಯೋಜಿಸುತ್ತಿತ್ತು, ಈ ವರ್ಷ ಮೂರು ಬಾರಿ ರಕ್ತದಾನ ಶಿಬಿರ ಆಯೋಜಿಸಿದ್ದನ್ನು ತುಂಬು ಮನದಿಂದ ಶ್ಲಾಘಿಸಿದರು. ಈ ಸೇವೆಯು ಹೀಗೆಯೇ ಮುಂದುವರಿಯಲಿ ಎಂದು ಆಶಿಸಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ|| ವಿ.ಎ. ಕುಲಕರ್ಣಿಯವರು ವಿದ್ಯಾರ್ಥಿಗಳು ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಸ್ವಯಂ ಪ್ರೇರಿತರಾಗಿ ರಕ್ತದಾನ ಮಾಡುವಂತೆ ಕರೆ ನೀಡಿದರು. ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳು ಮತ್ತು 50ಕ್ಕೂ ಅಧಿಕ ವಿದ್ಯಾರ್ಥಿಗಳು ಈ ಸಂದರ್ಭದಲ್ಲಿ ರಕ್ತದಾನ ಮಾಡಿದರು.

ಎನ್.ಎಸ್.ಎಸ್ ಸಂಚಾಲಕರಾದ ಪ್ರೊ|| ವಿ.ಎಮ್ ಚೌಗುಲಾ ನಿರೂಪಿಸಿದರು, ಆಡಳಿತ ವಿಭಾಗದ ಮುಖ್ಯಸ್ಥರಾದ ಪ್ರೊ|| ಮಂಜುನಾಥ ಡಿ. ವಂದಿಸಿದರು.

ಪ್ರಾಂಶುಪಾಲರು

Principal
KLS Vishwanathrao Deshpande
Institute of Technology, Haliyal


ಶ್ರೀ ವಿ.ಆರ್.ದೇಶಪಾಂಡೆ ಮೆಮೋರಿಯಲ್ ಟ್ರಸ್ಟ್
ಕೆ.ಎಲ್.ಎಸ್. ವಿಶ್ವನಾಥರಾವ್ ದೇಶಪಾಂಡೆ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಾಜಿ
ಕೆನರಾ ಬ್ಯಾಂಕ್ ದೇಶಪಾಂಡೆ ಆರ್ ಸೆಟಿ,
ಪದ್ಮಶ್ರೀ ಡಾ.ಆರ್.ಬಿ.ಪಾಟೀಲ ಕ್ಯಾನ್ಸರ್ ಆಸ್ಪತ್ರೆ ರಕ್ತ ನಿಧಿ ಕೇಂದ್ರ, ನವನಗರ ಹುಬ್ಬಳ್ಳಿ


अमृतं तु विद्या